ಆರಂಭಮಾಡಿ ಮುಗಿಯದೇ ಇರತಕ್ಕಂಥ ಮನೆಗಳನ್ನು ಪೂರೈಸುವ ಸಲುವಾಗಿ ಇನ್ನು ಮೂರು ಲಕ್ಷ ರೂಪಾಯಿ ಹಣ ಕೊಡಬೇಕೆಂದು ಕೇಳಿದ್ದಕ್ಕೆ ಅದನ್ನು ಕೊಟ್ಟಿರುತ್ತಾರೆ. ಆದ್ದರಿಂದ ದುಡ್ಡಿನ ಕೊರತೆ ಏನೂ ಇಲ್ಲ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ ಮೂರು ಸಾವಿರ ನಾಲ್ಕು ಸಾವಿರ ಏನು ಹಣವನ್ನು ಕೊಡುತ್ತೇವೆಂದು ಹೇಳಿರುತ್ತೀರಿ. ಕಳೆದ ಎರಡು ವರ್ಷಗಳಿಂದಲೂ ಇದು ಸಾಲದು ಇದನ್ನು ಹೆ ಸಾವಿರ ರೂಪಾಯಿಗಳಿಗೆ ಏರಿಸಬೇಕೆಂದು ಕೇಳುತ್ತಲೇ ಇರುತ್ತೇವೆ. ದಯವಿಟ್ಟು ಇದನ್ನು ಹೆ ಸಾವಿರ ರೂಪಾಯಿಗಳಿಗೆ ಏರಿಸಿದರೆ ಅವರು ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಹೆ ಸಾವಿರ ರೂಪಾಯಿಗಳನ್ನು ಕೊಡಲು ದಯವಿಟ್ಟು ಪ್ರಯತ್ನ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಹೆ ಸಾವಿರ ರೂಪಾಯಿಗಳನ್ನು ಕೊಡುವ ಬಗ್ಗೆ ಹೌಸಿಂಗ್ ಮಿನಿಸ್ಟರ್ ಕಾನ್ಫರೆನ್ಸ್‌ನಲ್ಲಿ ಸಮಾಲೋಚನೆ ಮಾಡಿದೆವು. ಅವರು ೨೫–೩೦ ಅಡಿಗಳಿಗಿಂತ ಕಡಿಮೆ ಸ್ಥಳದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಅವರು ಒಪ್ಪುವುದಿಲ್ಲ. ಡೆಪ್ಯುಟಿ ಕಮಿಷನರ್ ಮತ್ತು ಪೈನಾನ್ಸ್ ಮಿನಿಸ್ಟರ್ ಒಪ್ಪದ ಕಾರಣ ನಾವು ಕೊಡತಕ್ಕಂಥ ಹಣದ ಜೊತೆಗೆ ತಮ್ಮ ಸ್ವಂತ ಹಣವನ್ನು ಕಾಂಟ್ರಿಬ್ಯೂಟ್ ಮಾಡಿದರೆ ತಮ್ಮ ಅಗತ್ಯತೆಗೆ ತಕ್ಕಂಥ ಚೆನ್ನಾಗಿ ಮನೆಗಳನ್ನು ಕಟ್ಟಿಕೊಳ್ಳಬಹುದೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಸೈಟ್ ಕೊನೆಪಕ್ಷ ೩೦X೪೦ ಅಡಿಗಳಷ್ಟಾದರೂ ಆಳತೆಯುಳ್ಳಂತೆ ಕೊಡಬೇಕು. ಈಗ ಕೊಡುತ್ತಿರುವ ೨೦X೩೦ರಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಕಷ್ಟವಾಗುತ್ತದೆ. ಕೊನೆಪಕ್ಷ ೩೦X೪೦ ಅಡಿಗಳಷ್ಟಾದರೂ ಆಳತೆಯುಳ್ಳ ಸೈಟು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್,—ಹುಡ್ಕೋದವರು ಹೇಳುತ್ತಾರೆ ಸ್ವಲ್ಪ ಸ್ಥಳದಲ್ಲಿಯೇ ಚೆನ್ನಾಗಿ ಮನೆಗಳನ್ನು ಕಟ್ಟಿಕೊಳ್ಳಬಹುದೆಂದು. ಐದು ಸಾವಿರ ರೂಪಾಯಿಗಳನ್ನು ಕೊಡುವುದಾದರೆ ಹೆಚ್ಚಿನ ಜನರಿಗೆ ಕೊಡಲಿಕ್ಕೆ ಸಾಧ್ಯವಾಗದ ಕಾರಣ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ಅದರಲ್ಲಿ ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ರಾಜ್ಯ ಸರ್ಕಾರದವರು ಹೇಳುತ್ತಿರುತ್ತಾರೆ.

MR. SPEAKER.—Q. 339 (291) is held over.

## Improvement of Roads and Street Lights in Bangalore City

331 SRI M. CHANDRASEHKHAR (Jayanagar))—Will the Minister for Housing and Urban Development be pleased to state.—

(a) whether it is a fact that the Bangalore City Corporation is raising a debenture loan of Rs. 2 crores for the improvement of roads and street lighting in Bangalore City ;

(b) whether it is a fact that Bangalore City Corporation (Administration) over-stepping its power of financial management and imposing financial burden on the citizens ?

SRI DHARAM SINGH (Minister for Housing and Urban Development).—

(a) The Bangalore City Corporation has not raised debenture loan of Rs. 2 crores for the improvement of roads and street lighting in Bangalore. However, the Corporation has raised a loan for repayment of debenture loan of Rs. 2.20 crores raised during the year 1969.

(b) No

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಸಾಲವನ್ನು ತೆಗೆದುಕೊಂಡಿದ್ದಾತೆ. ನಾವು ಹೇಳುವ ಉದ್ದೇಶ ಇಲ್ಲದಿದ್ದರೂ ಕೂಡ ಎರಡು ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಂಡಿರುವುದಾಗಿ ಕಾರ್ಪೊರೇಷನ್‌ರವರು ಹೇಳಿದ್ದಾರೆ. ೧೯೬೯ರಲ್ಲಿ ಯಾವ ಉದ್ದೇಶಕ್ಕಾಗಿ ಸಾಲವನ್ನು ತೆಗೆದುಕೊಂಡಿರೋ ಆ ಸಾಲ ಹನ್ನೆರಡು ವರ್ಷಗಳಾದರೂ ಇಲ್ಲಿಯವರೆಗೆ ತೀರದೆ ಇರುವುದಕ್ಕೆ ಕಾರಣವೇನು ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ ೧೯೬೯ರಲ್ಲಿ ಕಾರ್ಪೊರೇಷನ್‌ರವರು ಜಯನಗರದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಯುಟಿಲಿಟಿ ಬಿಲ್ಡಿಂಗ್‌ಗಳನ್ನು ಕಟ್ಟಿಸುವ ಸಲುವಾಗಿ ಡಿಬೆಂಚರ್ ಸಾಲವನ್ನು ತೆಗೆದುಕೊಳ್ಳಲಾಯಿತು. ೧೯೬೯ರಲ್ಲಿ ಈ ಹಣ ದೊರೆಯಿತು. ೧೯೬೯ರಿಂದ ೧೯೮೧ರವರೆಗೆ ಯುಟಿಲಿಟಿ ಬಿಲ್ಡಿಂಗ್ ಮತ್ತು ಜಯನಗರ ಕಾಂಪ್ಲೆಕ್ಸ್ ಕನ್‌ಸ್ಟ್ರಕ್ಷನ್ ನಡೆಯಿತು ಈಗ ಕಂಪ್ಲೀಟ್ ಆಗುತ್ತಿದೆ. ಡಿಬೆಂಚರ್ ಲೋನ್ ರೀ ಪೇ ಮಾಡಬೇಕೆಂದು ೨.೨೦ ಕೋಟಿ ರೂಪಾಯಿಗಳ ಲೋನ್ ರೈಸ್ ಮಾಡಲಾಯಿತು. ಆ ಹಣದಲ್ಲೂ ಕೆಲವು ಭಾಗವನ್ನು ಬೆಂಗಳೂರು ನಗರಸಭೆಯ ಸಮಸ್ಯೆಗಳನ್ನು ನಿವಾರಣೆ ಮಾಡಬೇಕಾಗಿರುವುದರಿಂದ ಹಣವನ್ನು ತೆಗೆದಿಟ್ಟಿದ್ದೇವೆ. ಸಿಂಕ್ಕಿಂಗ್ ಫಂಡ್‌ನಲ್ಲೂ ಕೂಡ ಕೆಲವು ಭಾಗದ ಹಣವನ್ನು ಡಿಬೆಂಚರ್ ಲೋನಿಗೆ ಕೊಡಬೇಕೆಂದು ೧೯೬೯ನೇ ಇಸವಿಯಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಈಗ ಸಾಲವನ್ನು ತೀರಿಸಲು ನಿದಾನವಾದರೂ ಕೂಡ ಯುಟಿಲಿಟಿ ಬಿಲ್ಡಿಂಗ್ ಮತ್ತು ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರತಕ್ಕಂಥ ಎರಡು ಥಿಯೇಟರ್‌ಗಳನ್ನು ಏನು ಕಟ್ಟಿರುತ್ತೀರಿ ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಕಾರ್ಪೊರೇಷನ್‌ಗೆ ಬರಬೇಕಾಗಿರುತ್ತದೆ. ಅವರ ಮೇಲೆ ಏನೇನು ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದರಿಂದ ಕಾರ್ಪೊರೇಷನ್‌ಗೆ ನಷ್ಟವಾಗುತ್ತಿದೆ. ಯಾವ ಉದ್ದೇಶಕ್ಕಾಗಿ ಇದನ್ನು ಕಟ್ಟಿಸಿದರೋ ಆ ಉದ್ದೇಶ ಸಫಲವಾಗಿಲ್ಲ ಎನ್ನುವುದು ತಮ್ಮ ಭಾವನೆಗೆ ಬರುವುದಿಲ್ಲವೇ.

ಶ್ರೀ ಧರ್ಮಸಿಂಗ್.—ನಾನು ಒಪ್ಪುತ್ತೇನೆ. ಈಗಾಗಲೇ ಕಾರ್ಪೊರೇಷನ್ ಮತ್ತು ಸರ್ಕಾರಿ ಅಧಿಕಾರಿಗಳ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಬಹಳಷ್ಟು ಹಣವನ್ನು ವಸೂಲು ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅವರುಗಳು ಕೋರ್ಟಿಗೆ ಹೋಗಿದ್ದಾರೆ. ಅವರಿಗೆ ನೋಟೀಸ್ ಕೊಟ್ಟಿದ್ದೇವೆ. ರಿಕವರಿ ಮಾಡುವುದಕ್ಕೆ ಯಾವ ವಿಧವಾಗಿಯೂ ಹಿಂಜರಿಯುವುದಿಲ್ಲ. ಅವರು ಕೋರ್ಟಿಗೆ ಹೋಗಿರುವುದರಿಂದ ರಿಕವರಿ ಮಾಡುವುದಕ್ಕೆ ಸ್ವಲ್ಪ ತಡವಾಗಿದೆಯೆಂದು ಹೇಳುತ್ತೇನೆ.

ಶ್ರೀ ಪಿ. ರಾಮದೇವ್.—೧೯೬೯ರಲ್ಲಿ ೨.೨೦ ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಇಲ್ಲಿಯವರೆಗೆ ಸಾಲವನ್ನು ಎಷ್ಟು ತೀರಿಸಿದ್ದೀರಿ ? ಇನ್ನೆಷ್ಟು ತೀರಿಸಬೇಕಾಗಿದೆ ? ಸಾಲವನ್ನು ಯಾವ ಹಣದಿಂದ ತೀರಿಸುತ್ತಿದ್ದೀರಿ ? ಜನಗಳು ಕೊಡತಕ್ಕ ಟ್ಯಾಕ್ಸ್‌ನಿಂದ ತೀರಿಸಂತ್ತಿರೋ ಅಥವಾ ನೀವು ಸಾಲವನ್ನು ಯಾವ ಉಪಯೋಗಕ್ಕೆ ತೆಗೆದುಕೊಂಡಿದ್ದೀರಿ ಅದರ ಉತ್ಪತ್ತಿಯಿಂದ ತೀರಿಸಂತ್ತಿರೋ ದಯಮಾಡಿ ತಿಳಿಸಬೇಕು.

ಶ್ರೀ ಧರ್ಮಸಿಂಗ್.—ನಾವು ಡಿಬೆಂಚರ್ ಸಾಲ ತೆಗೆದುಕೊಂಡಿರುವುದು ಜನಗಳು ಕೊಡತಕ್ಕ ಟ್ಯಾಕ್ಸ್‌ನಿಂದ ತೀರಿಸುವುದಕ್ಕಲ್ಲ. ನಾವು ಸಾಲ ತೆಗೆದುಕೊಂಡು ಜಯನಗರದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಮಾಡಿದ್ದೇವೆ. ಅದರಲ್ಲಿ ರೆವಿನ್ಯೂ ಬರುತ್ತಿದೆ ಅದನ್ನು ಸಾಲಕ್ಕೆ ಕೊಡುತ್ತಿದ್ದೇವೆ. ನುಂದಾದರೂ ಕೂಡ ನಾವು ಕಟ್ಟಡಗಳನ್ನು ಕಟ್ಟಿರುವ ಕಡೆ ಬರತಕ್ಕ ಆದಾಯದಿಂದ ಸಾಲವನ್ನು ತೀರಿಸುತ್ತೇವೆ.

ಶ್ರೀ ಪಿ. ರಾಮದೇವ್.—೧೯೬೯ರಲ್ಲಿ ತೆಗೆದುಕೊಂಡಿರುವ ಸಾಲದಲ್ಲಿ ಇದುವರೆಗೆ ಎಷ್ಟು ಮರು ಪಾವತಿ ಮಾಡಿದ್ದೀರಿ ?

ಶ್ರೀ ಧರ್ಮಸಿಂಗ್.—ಆ ಮೇಲೆ ತಿಳಿಸುತ್ತೇನೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—೧೯೬೯ರಲ್ಲಿ ಸಾಲ ತೆಗೆದುಕೊಂಡು ೧೨-೧೩ ವರ್ಷಗಳಾದರೂ ತೀರಿಸಿಲ್ಲ. ಸಾಲ ತೆಗೆದುಕೊಂಡು ಸಿನಿಮ ಮಂದಿರ ಕಟ್ಟಿಸಿ ಆ ಹಣಕ್ಕೆ ಬಡ್ಡಿಯನ್ನು ಕೊಡುವಾಗ ಸಿನಿಮಾ ಮಂದಿರದವರು ಮತ್ತು ಕಟ್ಟಡಗಳವರು ಸರಿಯಾಗಿ ಬಾಡಿಗೆ ಕೊಡದೆ ಹೋದರೆ ಏನು ಪ್ರಯೋಜನ ? ಕಾರ್ಪೊರೇಷನ್ ಈಗಲೂ ಕೆಲವಾರು ಬಿಲ್ಡಿಂಗ್ಸ್ ಕಟ್ಟುತ್ತಿದ್ದಾರೆ. ಬಾಡಿಗೆಗೆ ಕಟ್ಟಡಗಳನ್ನು ಪಡೆದುಕೊಂಡವರು ಬಾಡಿಗೆ ಕೊಡುವುದನ್ನು ವಿಳಂಬ ಮಾಡದೆ ಬೇಗ ಕೊಡುವಂತೆ ವ್ಯವಸ್ಥೆ

ಮಾಡಬೇಕು. ಇನ್ನು ಮುಂದೆ ಈ ರೀತಿ ಮಾಡಲು ಕಾರ್ಪೊರೇಷನ್‌ಗೆ ಮಾನ್ಯ ಮಂತ್ರಿಗಳು ಡೈರೆಕ್ಷನ್ ಕೊಡುತ್ತಾರೆಯೆ ?

ಶ್ರೀ ಧರ್ಮಸಿಂಗ್.—ಸಾಲ ತೆಗೆದುಕೊಂಡ ಮೇಲೆ ಸಾಲವನ್ನು ಮರುಪಾವತಿ ಮಾಡಲೇಬೇಕು, ಆದ್ದರಿಂದ ಆ ಬಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಜಯನಗರ ಕಾಂಪ್ಲೆಕ್ಸ್‌ನಲ್ಲಿರುವ ಪೂನಂ ಥಿಯೇಟರ್‌ನವರು ಕೊಡ ಬೇಕಾಗಿರುವ ಹಿಂದಿನ ಬಾಕಿ ಎಷ್ಟು ? ಈಗ ಎಷ್ಟು ಕೊಡಬೇಕು ? ೩ ತಿಂಗಳಿಂದ ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ನೀವು ಪಡೆದುಕೊಂಡಿರುವ ೨.೨೦ ಕೋಟಿ ರೂಪಾಯಿಗಳಿಗೆ ಎಷ್ಟು ಬಡ್ಡಿಯಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಧರ್ಮಸಿಂಗ್.—ಬಡ್ಡಿ ವಿಷಯದ ವಿವರ ನನ್ನ ಹತ್ತಿರವಿಲ್ಲ. ಪೂನಂ ಥಿಯೇಟರ್‌ನವರು ಕೋರ್ಟ್‌ಗೆ ಹೋಗಿದ್ದಾರೆ. ಅವರ ಮೇಲೆ ನಾವು ತೀಕ್ಷ್ಣವಾದ ಕ್ರಮ ತೆಗೆದುಕೊಂಡಿದ್ದೇವೆ. ಪೂರ್ವ ಭಾವಿಯಾಗಿ ಅವರಿಗೆ ಒಳಗಿಂದೊಳಗೆ ತೊಂದರೆಕೊಟ್ಟು ಹಣವನ್ನು ವಸೂಲಿ ಮಾಡುತ್ತಿದ್ದೇವೆ. ಲೈಟ್ ಕೊಡುವುದಿಲ್ಲ ಈ ತರಹ ತೊಂದರೆ ಕೊಟ್ಟು ಹಣವನ್ನು ವಸೂಲಿಮಾಡತಕ್ಕ ದೃಷ್ಟಿಯಿಂದ ಮಾಡು ತ್ತಿದ್ದೇವೆ. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೆಚ್ಚು ಗಮನ ಕೊಟ್ಟಿದ್ದೇವೆ. ಹಣ ವಸೂಲಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ೧೯೬೯ರಲ್ಲಿ ತೆಗೆದುಕೊಂಡ ಡಿಬೆಂಚರ್ ಸಾಲವನ್ನು ಪೂರ್ತಿಯಾಗಿ ದಿನಾಂಕ ೧೭-೧೧-೧೯೮೧ರಲ್ಲಿ ಮರುಪಾವತಿ ಮಾಡಿದ್ದೇವೆ.

## Implemention of Compulsory Education in the State

420 SRI M. GANGANNA (Kushtagi).—Will the Minister State for Primary and Secondary Education be pleased to state.—

(a) the year from which compulsory education has been implemented by the State Government and Yearwise expenditure incurred for it (information for the last three years may please be furnished);

(b) the year from which the rule that there should be minimum of 300 population in a Village recognised by the Revenue Department as a village to start Primary School is in force, and what are the necessities of this rule ;

(c) whether suggestion has been received by the Government about the necessity of starting School in every village compulsorily duly abolishing the rule that the school should be started on the basis of population ;

(d) if so, measures taken by the Government in this regard ?

SMT. NAGAMMA C. KESHVAMURTHY (Minister of State for Primary and Secondary Education).—

(a) Im plemented from the year 1961 yearwise expenditure (in lakhs).—

| | | |
|---|---|---|
| 1978–79 | ... | 208.995 |
| 1979–80 | ... | 229.637 |
| 1980–81 | ... | 329.408 |